Prajavani, Date:13/05/23, p, no-04

ದಕ್ಷಿಣ ಕನ್ನಡ ಜಿಲ್ಲೆಯ 8 ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಇಂದು; ಮಧ್ಯಾಹ್ನದ ವೇಳೆಗೆ ಫಲಿತಾಂಶ ಪ್ರಕಟ ಸಾಧ್ಯತೆ

# ಪ್ರತಿ ಟೇಬಲ್‌ಗೆ ಕ್ಯಾಮೆರಾ; ಅಂಚೆ ಮತಕ್ಕೂ ಎಆರ್‌ಒ

ಪ್ರಜಾವಾಣಿ ವಾರ್ತೆ

ಮಂಗಳೂರು: ಜಿಲ್ಲೆಯ ಎಂಟು ವಿಧಾನಸಭಾ ಮತಕ್ಷೇತ್ರಗಳಲ್ಲಿ ಗೆಲುವು ಯಾರಿಗೆ ಮತ್ತು ಸೋತವರು ಯಾರು ಎಂಬ ಕುತೂಹಲಕ್ಕೆ ಶನಿವಾರ ತೆರೆ ಬೀಳಲಿದ್ದು ಎಲ್ಲ ಕ್ಷೇತ್ರಗಳ ಮತ ಎಣಿಕೆ ಕಾರ್ಯ ಸುರತ್ಕಲ್‌ನ ಎನ್‌ಐಟಿಕೆ ಆವರಣದಲ್ಲಿ ನಡೆಯಲಿದೆ.

ಎಣಿಕೆ ಕಾರ್ಯಕ್ಕೆ ಸಿದ್ಧತೆಗಳು ಪೂರ್ಣಗೊಂಡಿದ್ದು ಮೊದಲು ಅಂಚೆ ಮತಗಳ ಎಣಿಕೆ ನಡೆಯಲಿದೆ. ಇದೇ ಮೊದಲ ಬಾರಿ ಪ್ರತಿ ಟೇಬಲ್‌ಗೂ ಸಿಸಿಟಿವಿ ಕ್ಯಾಮೆರಾ ಕಣ್ಗಾವಲು ಇರಲಿದ್ದು, ಅಂಚೆ ಮತ ಎಣಿಕೆ ಮಾಡುವ ಪ್ರತಿ ಟೇಬಲ್‌ಗೆ ಒಬ್ಬರು ಸಹಾಯಕ ಚುನಾವಣಾಧಿಕಾರಿಯನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ರವಿಕುಮಾರ್ ಎಂ.ಆರ್ ತಿಳಿಸಿದರು.

ಎಣಿಕೆ ಕೇಂದ್ರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜ್ಯದಲ್ಲೇ ಅತಿ ಹೆಚ್ಚು 20,150 ಅಂಚೆ ಮತಗಳು ಜಿಲ್ಲೆಯಲ್ಲಿ ದಾಖಲಾಗಿವೆ. ಚುನಾವಣೆಗೆ ಮೂರು ಹಂತದ ಭದ್ರತಾ ವ್ಯವಸ್ಥೆ ಮಾಡಲಾಗಿದ್ದು ಇವಿಎಂ, ವಿವಿ ಪ್ಯಾಟ್ಸ್ ದಾಖಲೆ ಇರಿಸಿರುವ ಭದ್ರತಾ ಕೊಠಡಿಗಳ 100 ಮೀಟರ್ ವ್ಯಾಪ್ತಿಯಲ್ಲಿ ತಡೆಬೇಲಿ ಅಳವಡಿಸಲಾಗಿದೆ ಎಂದರು.

ಮತ ಎಣಿಕೆ ಕೇಂದ್ರಗಳಲ್ಲಿ ಕೇಂದ್ರೀಯ ಶಸ್ತ್ರಸಜ್ಜಿತ ಪೊಲೀಸರು, ಅರೆಸೇನಾ ಪಡೆಗಳು ಮತ್ತು ಜಿಲ್ಲಾ ಸಶಸ್ತ್ರ ಪಡೆಯ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು ಕೇಂದ್ರಕ್ಕೆ ಅಭ್ಯರ್ಥಿಯಾಗಲಿ ಅವರ ಏಜೆಂಟರಾಗಲಿ ಮೊಬೈಲ್ ಫೋನ್, ಲ್ಯಾಪ್‌ಟಾಪ್ ಸೇರಿದಂತೆ ಯಾವುದೇ ಇಲೆಕ್ಟ್ರಾನಿಕ್ ಉಪಕರಣಗಳನ್ನು ತೆಗೆದುಕೊಂಡು ಹೋಗುವಂತಿಲ್ಲ. ಇದು ಎಣಿಕೆ ಸಿಬ್ಬಂದಿಗೂ ಅನ್ವಯವಾಗುತ್ತದೆ ಎಂದು ಅವರು ವಿವರಿಸಿದರು.

ಮೊದಲ ಅರ್ಧ ತಾಸು ಅಂಚೆ ಮತಗಳ ಎಣಿಕೆ ನಡೆಯಲಿದೆ. ನಿಗದಿತ ಅವಧಿಯಲ್ಲಿ ಅಂಚೆ ಮತಗಳ ಎಣಿಕೆ ಮುಕ್ತಾಯ ಆಗದೇ ಇದ್ದರೂ ಇವಿಎಂ ಮತಗಳ ಎಣಿಕೆ ಶುರುವಾಗಲಿದ್ದು ಏಕಕಾಲದಲ್ಲಿ ಮುಂದುವರಿಯಲಿದೆ ಎಂದು ಅವರು ಹೇಳಿದರು.

**544** ಎಣಿಕೆ ಕಾರ್ಯದಲ್ಲಿ ಪಾಲ್ಗೊಳ್ಳುವ ಸಿಬ್ಬಂದಿ

**₹2000** ಶನಿವಾರ ಮದ್ಯ ಮಾರಾಟ ಮಾಡಿದವರಿಗೆ ದಂಡ



**14** ಪ್ರತಿ ಸುತ್ತಿನ ಇವಿಎಂ ಮತ ಎಣಿಕೆಗೆ ಬಳಸುವ ಟೇಬಲ್

**5** ಪ್ರತಿ ಸುತ್ತಿನ ಅಂಚೆ ಮತ ಎಣಿಕೆಗೆ ಬಳಸುವ ಟೇಬಲ್

**2 ಗಂಟೆಯ ಒಳಗೆ ಫಲಿತಾಂಶ:** ಮಧ್ಯಾಹ್ನ 1 ಅಥವಾ 2 ಗಂಟೆಯ ಒಳಗೆ ಮತ ಎಣಿಕೆ ಪ್ರಕ್ರಿಯೆ ಪೂರ್ಣಗೊಂಡು ಅಂತಿಮ ಫಲಿತಾಂಶ ಹೊರಬೀಳುವ ಸಾಧ್ಯತೆ ಇದೆ. ಎಣಿಕೆಯ ನಂತರ ಕಂಟ್ರೋಲ್ ಯೂನಿಟ್ ಮತ್ತು ವಿವಿ ಪ್ಯಾಟ್‌ಗಳನ್ನು ಜಿಲ್ಲೆಯ ಉಗ್ರಾಣಕ್ಕೆ ಕಳುಹಿಸಲಾಗುವುದು. ಇದೇ ಮೊದಲ ಬಾರಿ ವಿವಿ ಪ್ಯಾಟ್ ಸ್ಲಿಪ್ ತೆಗೆದು ಕಪ್ಪು ಕವರ್‌ನಲ್ಲಿ ಹಾಕಿ ಇಡುವಂತೆ ಚುನಾವಣಾ ಆಯೋಗದಿಂದ ನಿರ್ದೇಶನ ಸಿಕ್ಕಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

**ವೀಕ್ಷಕರು:** ಬೆಳ್ತಂಗಡಿ ಕ್ಷೇತ್ರಕ್ಕೆ ಐಎಎಸ್ ಅಧಿಕಾರಿ ಸರೋಜ್ ಕುಮಾರ್, ಮೂಡುಬಿದಿರೆ ಕ್ಷೇತ್ರಕ್ಕೆ ಎಸ್‌ಸಿಎಸ್ ಕಿಶೋರ್ ಕುಮಾರ್, ಮಂಗಳೂರು ಉತ್ತರ ಕ್ಷೇತ್ರಕ್ಕೆ ಐಎಎಸ್ ಅಧಿಕಾರಿ ಸೌರಭ್ ಭಗತ್, ಮಂಗಳೂರು ದಕ್ಷಿಣ ಕ್ಷೇತ್ರಕ್ಕೆ ಎಸ್‌ಸಿಎಸ್ ಬನ್ನಿ ಭಾಗೂಜಿ ಗವಳಿ, ಮಂಗಳೂರು (ಉಳ್ಳಾಲ) ಕ್ಷೇತ್ರಕ್ಕೆ ಐಎಎಸ್ ಅಧಿಕಾರಿ ದೀಪಂಕರ್ ಸಿನ್ಹಾ, ಬಂಟ್ವಾಳ ಕ್ಷೇತ್ರಕ್ಕೆ ಎಸ್‌ಸಿಎಸ್ ಚಂದ್ರಕಾಂತ್ ಶತ್ರುಘ್ನ ತೋರಟ್, ಪುತ್ತೂರು ಕ್ಷೇತ್ರಕ್ಕೆ ಐಎಎಸ್ ಅಧಿಕಾರಿ ಶಿವ ಸಹಾಯ್ ಅವಾಸ್ತಿ ಮತ್ತು ಸುಳ್ಯ ಕ್ಷೇತ್ರಕ್ಕೆ ಎಸ್‌ಸಿಎಸ್ ಅಜಿ ಫಿಲಿಪ್ ಅವರು ವೀಕ್ಷಕರಾಗಿರುವರು ಎಂದರು.



ಮತ ಎಣಿಕೆ ಪ್ರಕ್ರಿಯೆ ಬಗ್ಗೆ ಜಿಲ್ಲಾಧಿಕಾರಿ ರವಿಕುಮಾರ್ ಮಾಹಿತಿ ನೀಡಿದರು ಪ್ರಜಾವಾಣಿ ಚಿತ್ರ

| ಭದ್ರತೆಗೆ ನೇಮಿಸಿದ ಸಿಬ್ಬಂದಿ | |
|---|---|
| ಡಿಸಿಪಿ | 2 |
| ಡಿವೈಎಸ್ಪಿ | 6 |
| ಸಿಪಿಐ | 14 |
| ಪಿಎಸ್‌ಐ | 35 |
| ಎಎಸ್‌ಐ | 39 |
| ಹೆಡ್‌ಕಾನ್‌ಸ್ಟೆಬಲ್ | 304 |
| ಗೃಹರಕ್ಷಕ ದಳ | 200 |
| ಸಿವಿಲ್ ಪೊಲೀಸ್ | 400 |
| ಸಿಎಆರ್ | 4 ಪ್ಲಟೂನ್ |
| ಸಿಎಪಿಎಫ್ | 2 ಕಂಪನಿ |

## ಜಿಲ್ಲೆಯಲ್ಲಿ ಮಧ್ಯರಾತ್ರಿ ವರೆಗೆ ನಿಷೇಧಾಜ್ಞೆ ಜಾರಿ

ಮತ ಎಣಿಕೆ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಶನಿವಾರ ಬೆಳಿಗ್ಗೆ 5ರಿಂದ ಮಧ್ಯರಾತ್ರಿ 12ರ ವರೆಗೆ ಜಿಲ್ಲೆಯಾದ್ಯಂತ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ 144ರನ್ವಯ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ಜಿಲ್ಲಾ ದಂಡಾಧಿಕಾರಿಯೂ ಆಗಿರುವ ರವಿಕುಮಾರ್ ತಿಳಿಸಿದರು.

ಜಿಲ್ಲೆಯಲ್ಲಿ 5ಕ್ಕಿಂತ ಹೆಚ್ಚು ಜನರು ಗುಂಪು ಸೇರುವುದು, ಮೆರವಣಿಗೆ, ಸಭೆ ಸಮಾರಂಭಗಳನ್ನು ಜರುಗಿಸುವುದನ್ನು ಹಾಗೂ ವಿಜಯೋತ್ಸವ ಆಚರಿಸುವುದನ್ನು ನಿಷೇಧಿಸಲಾಗಿದೆ.

'ಮಾರಕಾಸ್ತ್ರ, ಕಲ್ಲು, ಕ್ಷಾರಕ ವಸ್ತುಗಳು, ಸ್ಫೋಟಕಗಳನ್ನು ಸಂಗ್ರಹಿಸುವುದನ್ನು ಹಾಗೂ ಒಯ್ಯುವುದನ್ನು ನಿರ್ಬಂಧಿಸಲಾಗಿದೆ. ಪ್ರತಿಕೃತಿ ಪ್ರದರ್ಶಿಸುವುದು ಅಥವಾ ಸುಡುವುದನ್ನು ನಿಷೇಧಿಸಲಾಗಿದೆ. ಬಹಿರಂಗ ಘೋಷಣೆ ಕೂಗುವುದು, ವಾದ್ಯ ಬಾರಿಸುವುದು, ಪದ ಹಾಡುವುದು, ನಕಲಿ ಪ್ರದರ್ಶನ, ಪ್ರಚೋದನಕಾರಿ ಘೋಷಣೆ ಕೂಗುವುದು, ವ್ಯಕ್ತಿಗಳ ತೇಜೋವಧೆ ಮಾಡುವಂತಿಲ್ಲ. ಕಾನೂನು ಸುವ್ಯವಸ್ಥೆಗೆ ಭಂಗ ತರುವಂತಹ ಯಾವುದೇ ಕೃತ್ಯದಲ್ಲಿ ತೊಡಗುವಂತಿಲ್ಲ' ಎಂದು ಅವರು ತಿಳಿಸಿದರು.

ಎಣಿಕೆ ಕಾರ್ಯ ಸುತ್ತುಗಳಲ್ಲಿ

| ಕ್ಷೇತ್ರ | ಸುತ್ತು |
|---|---|
| ಮಂಗಳೂರು(ಉಳ್ಳಾಲ) | 15 |
| ಮಂಗಳೂರು ದಕ್ಷಿಣ | 18 |
| ಮಂಗಳೂರು ಉತ್ತರ | 18 |
| ಬಂಟ್ವಾಳ | 18 |
| ಬೆಳ್ತಂಗಡಿ | 18 |
| ಮೂಡುಬಿದಿರೆ | 16 |
| ಪುತ್ತೂರು | 16 |
| ಸುಳ್ಯ | 17 |



ಮತ ಎಣಿಕೆ ಕೇಂದ್ರದಲ್ಲಿ ಭದ್ರತೆಗಾಗಿ ನಿಯೋಜಿಸಲಾಗಿರುವ ಕೇಂದ್ರೀಯ ಮೀಸಲು ಪೊಲೀಸ್ ಪಡೆ ಸಿಬ್ಬಂದಿ ಪ್ರಜಾವಾಣಿ ಚಿತ್ರ